# ಶಾಲ್ ಶಾಲ್ ಎಲ್ನೋಡಿ ಶಾಲ್...



**ಸನ್ಮಾನಗಳಿಂದಾಗಿ ಅಲ್ಮೇರಾದ ಬಹುಪಾಲು ಆಕ್ರಮಿಸಿಕೊಂಡ ಶಾಲುಗಳು ಬಿಸಿತುಪ್ಪದಂತೆ. ಇವುಗಳನ್ನು ವಿಲೇವಾರಿ ಮಾಡುವುದಂತೂ ಬಹು ದೊಡ್ಡ ಸರ್ಕಸ್ಸು.**

■ **ಜ್ಯೋತಿ ಡಿ. ಬೊಮ್ಮಾ**

ಈ ಶಾಲು ಎಂಬ ಘನತೆಯ ವಸ್ತ್ರ ಇಷ್ಟೊಂದು ಅನುಪಯುಕ್ತ ಎಂದು ಅರಿವಾದದ್ದು ಈಚೆಗೆ. ಶಾಲು ಹೊದೆಸಿ ಸತ್ಕಾರ ಮಾಡುವಾಗ ಆ ಶಾಲಿಗಿರುವ ಪ್ರಾಮುಖ್ಯ ಕೆಲವೇ ಕ್ಷಣಗಳಲ್ಲಿ ಕರಗಿ, ಭಾರದ ಅನುಪಯುಕ್ತ ವಸ್ತುವಾಗಿಬಿಡುತ್ತದೆ. ಆದರೂ ಶಾಲು ಹೊದಿಸಿಕೊಳ್ಳುವ ಮೋಹದಿಂದ ಪಾರಾದವರು ಕಡಿಮೆ.

ಇಟ್ಟುಕೊಳ್ಳಲಾಗದ, ಬಿಸಾಡಲೂ ಆಗದ ಬಿಸಿತುಪ್ಪ ಈ ಶಾಲು. ಸತ್ಕಾರ ಮಾಡುವವರು ಅದನ್ನು ತ್ರಿಕೋನಾಕಾರದಲ್ಲಿ ಮಡಚಿ ಶಾಲಿನ ಎರಡು ತುದಿ ಹಿಡಿದು ಬೆನ್ನಿನ ಮೇಲೆ ಹೊದೆಸುವಾಗ ಗತ್ತಿನಿಂದಲೋ ವಿನಯದಿಂದಲೋ ಬಾಗಿದಾಗ, ಹೊದೆಸಿದವರು ಪಡುವ ಸಂಭ್ರಮ ಮತ್ತು ಹೊದೆಸಿಕೊಂಡವರ ವ್ಯಕ್ತಿತ್ವ, ಶಾಲಿನಿಂದ ಹೆಚ್ಚಾದ ಗೌರವ, ಎಲ್ಲವೂ ಮನೆಗೆ ಬರುವಷ್ಟರಲ್ಲಿ ಎಲ್ಲೋ ಮಾಯ. ಮೊದಲೇ ಇರುವ ವಸ್ತು, ವಸ್ತ್ರಗಳಿಗೆ ಜಾಗ ಮಾಡುವ ಹವಣಿಕೆಯಿಂದ ಬೇಸತ್ತ ಗೃಹಿಣಿಯರು ಈ ಶಾಲುಗಳ ಅತಿಕ್ರಮಣ ಸಹಿಸದೆ ಸಿಡಿಮಿಡಿಗುಟ್ಟುವುದು ಸಹಜವೇ.

ನಾವು ಹೆಂಗಳೆಯರು ಹಳೆ ವಸ್ತ್ರಗಳಿಂದಲೂ ಪ್ರಯೋಗ ಮಾಡುವಲ್ಲಿ ನಿಸ್ಸೀಮರು. ಹಳೆ ಕಾಟನ್ ಬಟ್ಟೆಗಳನ್ನು ಜೋಪಾನವಾಗಿಟ್ಟು ಮನೆ ಒರೆಸಲು, ಕಾರು ಕ್ಲೀನ್ ಮಾಡಲು, ಗ್ಯಾಸ್ ಕಟ್ಟೆ ಒರೆಸಲು ಬೇಕಾದಾಗ ಬಳಸುವವರು. ಹೀಗೆ ಹಳೆ ಬಟ್ಟೆ ಜೋಪಾನ ಮಾಡುವ ನಾವು ಈ ಶಾಲುಗಳೆಡೆಗೆ ಮಾತ್ರ ಆಸಕ್ತಿ ತೋರಿಸಿದ್ದು ಇಲ್ಲ.

ಪಟ್ಟೆ ಪೀತಾಂಬರದಂತೆ ಮಿಂಚುವ, ಇಲ್ಲವೇ ಪಾಲಿಯೆಸ್ಟರ್‌ನಲ್ಲಿರುವ ಇವು ನೀರು ಹೀರಿಕೊಳ್ಳಲಾರವು. ಹೋಗಲಿ ಕಟ್ ಮಾಡಿ ಬ್ಲೌಸ್ ಹೊಲಿಸಿಕೊಳ್ಳೋಣವೆಂದರೆ, ಎಲ್ಲವೂ ಒಂದೇ ನಮೂನೆ. ಚಿಕ್ಕಮಕ್ಕಳಿಗೆ ಫ್ರಾಕ್, ಲಂಗ ಹೊಲಿಸೋಣವೆಂದರೆ ಅಷ್ಟು ಕಷ್ಟಪಟ್ಟು ಹೊಲಿಸಿ ಒಂದು ಸಲ ಹಾಕಿಕೊಂಡು ನೀರಲ್ಲದ್ದಿದರೆ ಬಣ್ಣ ಮಾಸಿ ಜಾಳುಜಾಳಾಗಿ 'ನೋಡು ನನ್ನ ನಿಜ ಅವತಾರ' ಎಂದು ಸಾರುತ್ತದೆ.

ನಮ್ಮನೆಯಲ್ಲೂ ಶಾಲಿನ ಹಾವಳಿ ಹೆಚ್ಚೇ. ಮೊದಮೊದಲು ಶಾಲುಗಳನ್ನೆಲ್ಲ ಅಪೂರ್ವ ನಿಧಿಯಂತೆ ಮಡಚಿಡುವಾಗ ಹೆಮ್ಮೆ ಎನಿಸುತಿತ್ತು. ಸರ್ಕಾರಿ ಅಧಿಕಾರಿಯಾದ ಪತಿಗೆ ಅಲ್ಲಲ್ಲಿ ಕರೆದು ಸತ್ಕರಿಸಿದ ನೂರಾರು ಶಾಲುಗಳು ಮನೆಯಲ್ಲಿದ್ದರೂ ನನಗೆ ಹೊದೆಸಿದ ಶಾಲುಗಳ ಮೇಲೆ ಬಹಳ ಮೋಹ ನನಗೆ. ನನಗೆ ಹೊದೆಸಿದ ಶಾಲುಗಳನ್ನು ಬೆಡ್‌ರೂಮಿನ ಬೀರುವಿನಲ್ಲಿಟ್ಟರೆ, ಪತಿಯ ಶಾಲುಗಳನ್ನೆಲ್ಲ ಸ್ಟೋರ್ ರೂಂ ಕಪಾಟಿನಲ್ಲಿಟ್ಟಿದ್ದೆ. ಆದರೆ ಶಾಲುಗಳು ನನ್ನ ಅಲ್ಮೆರಾದ ಬಹುಭಾಗ ಕಬಳಿಸತೊಡಗಿದಾಗ ಅವುಗಳನ್ನೆಲ್ಲ ಸ್ಟೋರ್ ರೂಂಗೆ ಶಿಫ್ಟ್ ಮಾಡಬೇಕಾಯಿತು.

ಮನೆಯಲ್ಲಿ ಗುಡ್ಡೆಬಿದ್ದ ಶಾಲುಗಳ ವಿಲೇವಾರಿಗೆ ತಲೆ ಓಡಿಸತೊಡಗಿದೆ. ನಮ್ಮ ಕಡೆ ಪೂಜೆಗೆ ದೇವರನ್ನು ಮಂಟಪದ ಅಲಂಕಾರ ಮಾಡಿ ಅದರಲ್ಲಿ ಪ್ರತಿಷ್ಠಾಪಿಸುತ್ತಾರೆ. ಸುತ್ತಲೂ ಸೀರೆಗಳ ಪರದೆಗಳಿಂದ ಅಲಂಕರಿಸುತ್ತಾರೆ. ಶ್ರಾವಣ ಬಂದರೆ ಹಬ್ಬಗಳ ಸಂಭ್ರಮ. ಅಕ್ಕಪಕ್ಕದವರಿಗೆಲ್ಲ ನನ್ನಲ್ಲಿ ಬಣ್ಣಬಣ್ಣದ ಶಾಲುಗಳಿವೆಯೆಂದು, ಬೇಕಾದರೆ ತೆಗೆದುಕೊಳ್ಳಬಹುದೆಂದು ಮೊದಮೊದಲು ಉದಾರಿಯಾಗಿ ಹೇಳತೊಡಗಿದೆ. ಯಾರೂ ಕ್ಯಾರೆ ಅನ್ನದಿದ್ದಾಗ 'ಪ್ಲೀಸ್ ಶಾಲು ತಗೋರಿ' ಅಂತ ಗೋಗರೆಯತೊಡಗಿದೆ. ಆದರೂ ಒಬ್ಬರೂ ಆಸಕ್ತಿ ತೋರಲಿಲ್ಲ. ಒಂದು ಫೋನ್ ಹೊಡೆದರೆ ಮನೆವರೆಗೆ ಬಂದು ಬೇಕಾದ ರೀತಿ ಮಂಟಪದ ಅಲಂಕಾರ ಮಾಡಿಕೊಡುವವರು ಇರುವಾಗ ನನ್ನ ಶಾಲಿನಿಂದ ಅಲಂಕಾರ ಮಾಡುವವರು ಯಾರು?

ಅವರಿಗೆಲ್ಲ ದುರಹಂಕಾರ ಎಂದು, ನಮ್ಮ ಮನೆ ಸಹಾಯಕಿಯರಿಗೆ ಶಾಲು ಕೊಂಡೊಯ್ಯಲು ಹೇಳಿದರೆ, 'ಅವು ತಗೊಂಡು ಏನ್ ಮಾಡಬೇಕ್ರೀ. ಉಟ್ಟುಕೊಳ್ಳಕ್ಕೂ ಬರಲ್ಲ. ಹಚ್ಚಕೊಳ್ಳೊಕ್ಕು ಬರಲ್ಲ, ಇನ್ನ ಮನಿ ಒರಸರಿ ಅಂದ್ರ ನೀರು ಹೀರಿಕೊಳ್ಳಲ್ಲ. ನಮಗ ಬ್ಯಾಡ್ರೆವ್ವ' ಅಂತ ನಿರಾಕರಿಸಿಬಿಟ್ಟರು.

ಶಾಲುಗಳ ವಿಲೇವಾರಿ ಪ್ರಯತ್ನ ಮುಂದುವರೆದಿತ್ತು. ಹೇಗೆ ಬಂದಿದ್ದು ಹಾಗೇ ಹೋಗಬೇಕೆಂದು ಸಭೆ ಸಮಾರಂಭಗಳಿಗೆ ಹೋಗುವಾಗ ಆಮಂತ್ರಿಸಿದವರಿಗೆ ಹೊದೆಸಲು ಮನೆಯಲ್ಲಿದ್ದ ಶಾಲು ತೆಗೆದುಕೊಂಡು ಹೋಗತೊಡಗಿದೆ. ಶಾಲು ಹೊದೆಸಿ ಫೋಟೊ ತೆಗೆಸಿ ನಿರಾಳವಾಗಿ ವಾಪಸ್ಸು ತೆರಳುತ್ತಿದ್ದಂತೆ ಅವರು ತಡೆದು ಅಲ್ಲೇ ಇದ್ದ ಇನ್ನೊಂದು ಶಾಲನ್ನು ಹೊದೆಸಿ ಪ್ರತಿ ಸನ್ಮಾನ ಮಾಡಿದಾಗ 'ಹೋದೆಯಾ ಪಿಶಾಚಿ ಎಂದರೆ ಮತ್ತೆ ಬಂದೆ ಗವಾಕ್ಷಿಲಿ' ಎಂದು ಶಾಲು ಗಹಗಹಿಸಿ ನಗತೊಡಗಿತು.

ಅಮೆರಿಕದಂಥ ದೇಶಗಳಲ್ಲಿ ಜನರು ತಮಗೆ ಬೇಡದ ವಸ್ತುಗಳನ್ನು ಮನೆ ಹೊರಗೆ ರಸ್ತೆ ಮೇಲೆ ತಂದಿಡುತ್ತಾರಂತೆ. ಬೇಕಾದವರು ಕೊಂಡು ಹೋಗಬಹುದೆಂದು. ಹಾಗೇಕೆ ಮಾಡಬಾರದೆಂದು ನಸುಕಿನಲ್ಲಿ ಎದ್ದು ಶಾಲುಗಳ ಗಂಟುಗಳನ್ನು ಮನೆ ಹೊರಗೆ ತುಸು ದೂರದಲ್ಲಿಟ್ಟು ಬಂದೆ. ಕಿಟಕಿಯಲ್ಲಿ ಆಗಾಗ ನೋಡುತ್ತಲಿದ್ದೆ. ಕೆಲಸ ಮುಗಿಸಿ ಬಂದು ನೋಡಿದರೆ, ಗಂಟುಗಳು ಹೊರಗೆ ಹಾಗೇ ಇದ್ದವು. ಒಬ್ಬರೂ ಶಾಲು ಒಯ್ಯುವ ಔದಾರ್ಯ ತೋರಲೇ ಇಲ್ಲ. ಅಯ್ಯೋ ಶಾಲೇ ಎನ್ನುತ್ತ ಕುಳಿತಾಗ, ಪಕ್ಕದ ಮನೆಯವರು 'ಅಕ್ಕೋರೇ ಶಾಲುಗಳ್ಯಾಕೋ ಹೊರಗೆ ಇಟ್ಟಿರಲ್ಲ, ಮಳಿ ಮಾಡ ಆಗ್ಯಾದ, ನಿಮಗ ನೆನಪ ಹಾರಿರಬೇಕಂತ ನಾನೇ ತಂದ ನೋಡ್ರೀ' ಅನ್ನುತ್ತ ಇಟ್ಟು ಹೋದರು. ನನಗೂ ನಿನಗೂ ಅಂಟಿದ ನಂಟನ್ನು ಯಾರಿಂದಲೂ ಬಿಡಿಸಲಾಗದು ಎಂದುಕೊಳ್ಳುತ್ತ ಶಾಲುಗಳನ್ನು ತಂದು ಮೊದಲಿನ ಜಾಗದಲ್ಲೆ ಇರಿಸಿದೆ. ■

